ಕೇಳಿದ್ದಾರೆ. ಆದರೆ ನಿಯಮಾವಳಿ ಏನಿದೆ ಎಂದರೆ 4(2)ರ ಪ್ರಕಾರ ಇಲ್ಲಿರತಕ್ಕಂಥ ವಿವರದಂತೆ, ನಿಜವಾಗಿ ನಾನು ಇದನ್ನು ಓದಿಲ್ಲ. ಇಲ್ಲಿ ಬರವಣಿಗೆಯಲ್ಲಿ ಇರತಕ್ಕಂಥಾದ್ದು ಏನೆಂದರೆ, 5 ಸಾವಿರ ರೂಪಾಯಿ ತೆಗೆದುಕೊಂಡು ಯಾರ್ಯಾರನ್ನು ಸದಸ್ಯರನ್ನಾಗಿ ಮಾಡಬಹುದು ಎಂಬುದು ಇದರಲ್ಲಿದೆ. ಅದರಂತೆ ಆಜೀವ ಸದಸ್ಯರನ್ನಾಗಿ ಮಾಡುತ್ತಾರೆ. ಇಂಜಿನಿಯರ್‌ಗಳು, ಡಾಕ್ಟರ್‌ಗಳು, ವಿದ್ಯಾಸಂಸ್ಥೆಯ ಸಂಸ್ಥಾಪಕರು, ಕೈಗಾರಿಕೋದ್ಯಮಿಗಳು ಮತ್ತು ಇನ್ನೊಂದು ಪಾಯಿಂಟ್ ಇದೆ. ಅದು ಕ್ರೀಡಾಪಟುಗಳು, ಅದರಲ್ಲೇ ನಾನು ಬರುವುದು. ಇಷ್ಟು ದಿವಸ ನಾನು ಬೆಳಿಗ್ಗೆ ಮತ್ತು ಸಾಯಂಕಾಲ ಎರಡೂ ಹೊತ್ತು ಹೋಗಿ ಶೆಟಲ್ ಬ್ಯಾಡ್‌ಮಿಂಟನ್ ಆಡುತ್ತಿದ್ದೆ. ಮುಖ್ಯ ಮಂತ್ರಿಯಾದ ಮೇಲೆ ಸಮಯ ಸಿಗುವುದಿಲ್ಲವೆಂದು ಬೆಳಿಗ್ಗೆ ಮಾತ್ರ ಹೋಗುತ್ತಿದ್ದೇನೆ. ನಿನ್ನೆ ಹೋಗಿದ್ದೆ. ಇವತ್ತು ಕೂಡ ಬೆಳಿಗ್ಗೆ ಹೋಗಿದ್ದೆ.

ಶ್ರೀ ವಾಟಾಳ್ ನಾಗರಾಜ್:– ಹಾಗಾದರೆ ನಮಗೆ ಸದಸ್ಯತ್ವ ಇಲ್ಲವೇನು?

ಶ್ರೀ ಎಸ್ ಬಂಗಾರಪ್ಪ:– ನಿಯಮಾವಳಿ ಪ್ರಕಾರ ನನಗೂ ಕೂಡ ಗೊತ್ತಿರಲಿಲ್ಲ. ಸದಸ್ಯತ್ವ ಕೊಡಿ ಅಂತ ನಾನು ಕೇಳಿರಲಿಲ್ಲ. ನಾನು ಒಬ್ಬ ಗೆಸ್ಟ್ ಪ್ಲೇಯರ್ ಆಗಿ ಆಡುತ್ತಿದ್ದೆ. ಅವರೇ ಒಂದು ಸಲ ಮಿನಿಸ್ಟರ್ ಆಗಿಬಿಟ್ಟರೆ ಮಾಡಿಕೊಳ್ಳಬಹುದು ಎಂದು ಹೇಳಿದರು. ಅದೂ ಕ್ರೀಡಾಪಟು ಆಗಿದ್ದರೆ ... .

ಶ್ರೀ ವಾಟಾಳ್ ನಾಗರಾಜ್:– ನನಗೂ ಒಂದು ಅವಕಾಶ ಸಿಕ್ಕರೆ ನಾವೂ ಮೆಂಬರ್ ಆಗುತ್ತೇವೆ.

ಶ್ರೀ ಎಸ್. ಬಂಗಾರಪ್ಪ:– ಶ್ರೀ ವಾಟಾಳ್ ನಾಗರಾಜ್ ಅವರನ್ನೂ ಮಾಡಿಕೊಳ್ಳಬಹುದು. ಆದರೆ ಅವರು ಏನು ಆಟ ಆಡುತ್ತಿದ್ದಾರೆ ಎಂದು ಗೊತ್ತಾಗಬೇಕು.

ಶ್ರೀ ಎನ್. ಚೆಕ್ಕೇಗೌಡ:– 24 ಜನ ಅಧಿಕಾರೇತರ ಸದಸ್ಯರು ಇದ್ದಾರೆ; ಈಗ ತಾನೆ ಮುಖ್ಯಮಂತ್ರಿಗಳು ತಾವು ಶೆಟಲ್ ಬ್ಯಾಡ್‌ಮಿಂಟನ್ ಆಡುತ್ತೇನೆ ಎಂದು ಹೇಳಿದರು. ಶ್ರೀಮಾನ್ ಬಂಗಾರಪ್ಪನವರು ಮುಖ್ಯಮಂತ್ರಿ ಆಗುವುದಕ್ಕೆ ಮೊದಲೋ ಅಥವಾ ಯಾವಾಗ ಈ ಕ್ಲಬ್ಬಿನ ಸದಸ್ಯರಾದರು? ಮತ್ತು ಇನ್ನೂ ಅನೇಕರು ಸದಸ್ಯರಾಗುವುದಕ್ಕೆ ಅವಕಾಶ ಇದೆಯೇ ಎಂದು ಅವರನ್ನು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ:– ಸ್ವಾಮಿ, ನಾನು ಮುಖ್ಯಮಂತ್ರಿ ಆಗುವುದಕ್ಕೆ ಮುಂಚೆ ಸದಸ್ಯನಾಗಿದ್ದೇನೆ. ಯಾವಾಗ ಅಂದರೆ, ಶ್ರೀ ವೀರೇಂದ್ರ ಪಾಟೀಲರ ಸರ್ಕಾರದಲ್ಲಿ ವ್ಯವಸಾಯ ಮಂತ್ರಿಯಾಗಿದ್ದಾಗ. ವಾಸ್ತವವಾಗಿ ಅವರು ಸದಸ್ಯರಾಗಿ ಎಂದು ಅದಕ್ಕೂ ಮೊದಲಿನಿಂದಲೂ ಒತ್ತಾಯ ಮಾಡುತ್ತಿದ್ದರು. ನಾನು ಆಗಿರಲಿಲ್ಲ. ಆಮೇಲೆ ಹಣ ಕೇಳಿದರು. ಐದು ಸಾವಿರ ರೂಪಾಯಿ ಕೊಟ್ಟು ಸದಸ್ಯನಾಗಿದ್ದೇನೆ. ಈಗ ನಿಮ್ಮನ್ನು ಕೂಡ ತೆಗೆದುಕೊಳ್ಳಬಹುದು. ಆದರೆ ನೀವು ಕೂಡ ಆಟ ಆಡುತ್ತಿರಬೇಕು. ಏಕೆಂದರೆ ಕ್ರೀಡಾಪಟುಗಳು ಮಾತ್ರ.....

ಅಧ್ಯಕ್ಷರು: ಆಟ ಎಂದರೆ ಇಸ್ಪೀಟು ಆಟ ಅಲ್ಲ. ಬೆವರು ಸುರಿಸುವ ಆಟ.

ಶ್ರೀ ಎನ್.ಜಿ. ನಾಯಕ್:– ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಏನೆಂದರೆ ತಾವು ಆಟ ಆಡುವುದಕ್ಕೆ ಹೋಗುತ್ತೇನೆ ಎಂದು ಆಟವನ್ನು ಆಡುವುದು ಹುಡುಗರು, ಆದರೆ ಇವರು ರಾಜ್ಯದ ಮುಖ್ಯಮಂತ್ರಿಗಳು.

ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಬಗ್ಗೆ

384. ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ):– ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಕೃಷಿ ವಿಶ್ವವಿದ್ಯಾನಿಲಯವನ್ನು ಎಂದು ಪ್ರಾರಂಭಿಸಲಾಯಿತು?

ಆ) ಈ ಕೃಷಿ ವಿಶ್ವವಿದ್ಯಾನಿಲಯಕ್ಕೆ 1989–90, 1990–91ನೇ ಸಾಲಿಗಾಗಿ ಎಷ್ಟು ಹಣಕಾಸಿನ ನೆರವನ್ನು ನೀಡಲಾಗಿದೆ?

ಇ) ಈ ಕೃಷಿ ವಿಶ್ವವಿದ್ಯಾನಿಲಯ ಪ್ರಾರಂಭವಾದಾಗಿನಿಂದ ಇಲ್ಲಿಯವರೆವಿಗೆ ಯಾವ ಯಾವ ವಿಷಯದಲ್ಲಿ ಸಂಶೋಧನೆಗಳನ್ನು ಮಾಡಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ, (ಕೃಷಿ ಮತ್ತು ತೋಟಗಾರಿಕೆ ಸಚಿವರು):–

ಅ) 1–1–1986

ಆ)

	ಬ್ಲಾಕ್ ಅನುದಾನ (ಲಕ್ಷಗಳಲ್ಲಿ)	ಅಭಿವೃದ್ಧಿ ಅನುದಾನ (ಲಕ್ಷಗಳಲ್ಲಿ)
1989–90	375.62	195.00
1990–91 (ಜುಲೈ 91 ರವರೆಗೆ)	120.00	60.50

ಇ)
1) ಅಗ್ರಾನಮಿ
2) ತೋಟಗಾರಿಕೆ ಬೆಳೆಗಳು
3) ತರಕಾರಿ ಬೆಳೆಗಳು
4) ಒಣ ಬೇಸಾಯ
5) ಬೀಜೋತ್ಪಾದನೆ
6) ಕೃಷಿ ಮೈಕ್ರೋ ಬಯಾಲಜಿ
7) ಕೃಷಿ ಇಂಜಿನಿಯರಿಂಗ್
8) ಅರಣ್ಯ
9) ಗೃಹ ವಿಜ್ಞಾನ
10) ಪಶು ವಿಜ್ಞಾನ ಮುಂತಾದವುಗಳು

ಶ್ರೀ ಪಿ.ಸಿ. ಸಿದ್ದನಗೌಡರ್:– ಮಾನ್ಯ ಅಧ್ಯಕ್ಷರೇ, ಈ ಅನುದಾನ 1989–90ನೇ ಇಸವಿಯಲ್ಲಿ ಏನು ಕೊಟ್ಟಿದ್ದಾರೆ, ಅದರ ಅರ್ಧದಷ್ಟು 1990–91ನೇ ಇಸವಿಯಲ್ಲಿ ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯಮಂತ್ರಿಗಳು ಕಾರಣ ಹೇಳಬೇಕು. ಎರಡನೇ ಪ್ರಶ್ನೆ ಅಗ್ರಾನಮಿ ಎಂದು ಹೇಳಿದ್ದಾರೆ. ಇದರ ಮೀನಿಂಗ್ ನನಗೆ ತಿಳಿಯುತ್ತಾ ಇಲ್ಲ. ಇದರ ಬಗ್ಗೆ ದಯಮಾಡಿ ಮಂತ್ರಿಗಳು ಹೇಳಬೇಕು. ಅಗ್ರಿಕಲ್ಚರಲ್ ಯೂನಿವರ್ಸಿಟಿಯಿಂದ ಹೊಸ ತಳಿಯ ಬಗ್ಗೆ ಅನೇಕ ಸಲ ಕೃಷಿ ಮೇಳದಲ್ಲಿ ನಿರ್ಣಯ ತೆಗೆದುಕೊಂಡಿದ್ದಾರೆ. ಜಯಧರ ಮತ್ತಿತರ ಬೆಳೆಗಳ ಬಗ್ಗೆ ಇಲ್ಲಿ ಯಾವುದನ್ನೂ ತಿಳಿಸಿಲ್ಲ. ಕೇವಲ 10 ವಿಷಯಗಳ ಬಗ್ಗೆ ಮಾತ್ರ ಹೇಳಿದ್ದೀರಿ. ಇವುಗಳ ಬಗ್ಗೆ ವಿವರವಾಗಿ ಹೇಳಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ:– ಅಧ್ಯಕ್ಷರೇ, ಧಾರವಾಡ ಕೃಷಿ ವಿಶ್ವವಿದ್ಯಾನಿಲಯದವರು ಸುಮಾರು 10 ಸಂಶೋಧನೆ ಮಾಡತಕ್ಕ ವಲಯಗಳನ್ನು ಆರಂಭ ಮಾಡಿದ್ದಾರೆ. ಇವುಗಳಲ್ಲಿ ಪ್ರಥಮತಃ ಅಗ್ರಾನಮಿ, ತೋಟಗಾರಿಕೆ ಬೆಳೆಗಳು, ತರಕಾರಿ ಬೆಳೆಗಳು, ಒಣ ಬೇಸಾಯ, ಬೀಜೋತ್ಪಾದನೆ, ಕೃಷಿ ಮೈಕ್ರೋ ಬಯಾಲಜಿ, ಕೃಷಿ ಇಂಜಿನಿಯರಿಂಗ್, ಅರಣ್ಯ, ಗೃಹ ವಿಜ್ಞಾನ ಮತ್ತು ಪಶು ವಿಜ್ಞಾನ ಮುಂತಾದವುಗಳ ಸಂಶೋಧನೆಯನ್ನು ಈಗಾಗಲೇ ಮಾಡುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟ ಒಂದು ವರದಿಯನ್ನು ಸನ್ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಕಳುಹಿಸುತ್ತಿದ್ದೇನೆ. ಈ ಸಂಶೋಧನೆಗಳು ಬಹಳ ಚುರುಕು ರೀತಿಯಲ್ಲಿ ನಡೆಯುತ್ತಿವೆ; ಸಾಕಷ್ಟು ಪ್ರೋಗ್ರೆಸ್ ಆಗಿದೆಯೆಂದು ಅವರು ಕೊಟ್ಟಿರತಕ್ಕ ವರದಿಯಲ್ಲಿ ಇದೆ ಅವರಿಗೆ ಈ ವಿವರಗಳನ್ನು ಈ ಸಭೆಯ ಮೂಲಕ ಕಳುಹಿಸಿಕೊಡುತ್ತೇನೆ. ಅನುದಾನವನ್ನೂ ಕೂಡ ಸಾಕಷ್ಟು ಬಿಡುಗಡೆ ಮಾಡಿದ್ದೇವೆ. ಅದರಲ್ಲಿ ಬ್ಲಾಕ್ ಅನುದಾನ ಮತ್ತು ಅಭಿವೃದ್ಧಿ ಅನುದಾನ ಎಂದು ಎರಡು ವಿಧವಾದ ಅನುದಾನಗಳನ್ನು ಬಿಡುಗಡೆ ಮಾಡಿದ್ದೇವೆ. ಈ ಸಾರಿ ಜುಲೈ 1991ರ ವರೆಗೆ ಬ್ಲಾಕ್ ಅನುದಾನದಲ್ಲಿ 120 ಲಕ್ಷ ಮತ್ತು ಅಭಿವೃದ್ಧಿ ಅನುದಾನದಲ್ಲಿ 60.50 ಲಕ್ಷ ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಈ ಒಂದು ವಿಶ್ವವಿದ್ಯಾನಿಲಯದ ಕಾರ್ಯಪ್ರಗತಿ ಸಮಾಧಾನಕರವಾಗಿದೆ ಎಂಬ ವರದಿ ನಮ್ಮ ಮುಂದೆ ಇದೆ.

ಶ್ರೀ ಪಿ.ಸಿ. ಸಿದ್ದನಗೌಡರ್:– ಅಗ್ರಾನಮಿ ಈ ವಿಷಯ ಯಾವುದು, ಇದು ನನಗೆ ಗೊತ್ತಿಲ್ಲ. ಕೃಷಿಯಲ್ಲಿ ಈ ವಿಷಯ ಇಲ್ಲ. ಆದ್ದರಿಂದ ಈ ವಿಷಯ ಯಾವುದು ಎಂಬುದನ್ನು ತಾವು ತಿಳಿಸಬೇಕು.

ಅಧ್ಯಕ್ಷರು:– ಆ ವಿಷಯ ನನಗೆ ಗೊತ್ತಿಲ್ಲ. ಈಗ ಪ್ರಶ್ನೆಗಳ ಕಾಲ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು)

ಜಿಲ್ಲಾ ಪರಿಷತ್ತುಗಳ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ವಾಪಸ್ಸು ತೆಗೆದುಕೊಳ್ಳುವುದು.

366 ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ)– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲಾ ಪರಿಷತ್ತಿನ ರಸ್ತೆಗಳು ಪೂರ್ಣ ಸಾದುರಸ್ಥಿಯಾಗಿದ್ದು, ಇವುಗಳನ್ನು ಪುನಃ ಜಿಲ್ಲಾ ಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಯ ಅಧಿಕಾರ ವ್ಯಾಪ್ತಿಗೆ ತೆಗೆದುಕೊಳ್ಳುವ ವಿಚಾರ ಸರ್ಕಾರಕ್ಕೆ ಇದೆಯೇ?

ಶ್ರೀ ಎಸ್. ಬಂಗಾರಪ್ಪ, (ಮುಖ್ಯಮಂತ್ರಿಗಳು):–

ಅ) ಧಾರವಾಡ ಜಿಲ್ಲಾ ಪರಿಷತ್ತಿನ ಅಧೀನದಲ್ಲಿರುವ ಕೆಲವು ಗ್ರಾಮೀಣ ರಸ್ತೆಗಳನ್ನು ಹಾಗೂ ಇತರ ಜಿಲ್ಲಾ ರಸ್ತೆಗಳನ್ನು, ಮುಖ್ಯ ಜಿಲ್ಲಾ ರಸ್ತೆಗಳಾಗಿ ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳುವ ಪ್ರಸ್ತಾವನೆ ಇದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ: ಸನ್ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ 7ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸಹಕಾರ ಸಂಘಗಳ ಆಡಳಿತ ಕುಸಿದಿರುವ ಬಗ್ಗೆ

523. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಹಕಾರ ಸಂಘಗಳ ಆಡಳಿತ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಅಂತಹ ಸಹಕಾರ ಸಂಘಗಳ ಆಡಳಿತ ಮಂಡಳಿಯನ್ನು ರದ್ದು ಪಡಿಸುವ ಉದ್ದೇಶ ಸರ್ಕಾರಕ್ಕಿದೆಯೇ? ಹಾಗೂ ಇದನ್ನು ಎಂದಿನಿಂದ ಜಾರಿಗೆ ತರಲಾಗುವುದು?

ಇ) ಸಹಕಾರ ಸಂಘಗಳ ಆಡಳಿತ ಮಂಡಳಿಯನ್ನು ರದ್ದುಪಡಿಸಿದರೆ ಆಡಳಿತಾಧಿಕಾರಿಗಳನ್ನು ನೇಮಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು):–

ಅ) ಇಲ್ಲ.

ಆ) ನಿರ್ದಿಷ್ಟ ಆರೋಪಗಳಿಗೆ ಗುರಿಯಾದಂತಹ ಸಹಕಾರ ಸಂಘಗಳ ಆಡಳಿತ ಮಂಡಳಿಗಳನ್ನು ರದ್ದುಪಡಿಸಿ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 30(1) ಹಾಗೂ 30ಎ ಅನ್ವಯ ಆಡಳಿತಾಧಿಕಾರಿ ಅಥವಾ ವಿಶೇಷಾಧಿಕಾರಿಯನ್ನು ನೇಮಿಸಲು ಅವಕಾಶವಿರುತ್ತದೆ. ಇಂತಹ ಕ್ರಮಗಳನ್ನು ಅಗತ್ಯವಿರುವ ಕಡೆ ಆಗಿಂದಾಗಲೇ ಜಾರಿಗೊಳಿಸಲಾಗುತ್ತದೆ.

ಇ) ಸಹಕಾರ ಸಂಘಗಳ ಆಡಳಿತ ಮಂಡಲಿಗಳನ್ನು ರದ್ದು ಪಡಿಸಿದ ಕಡೆ ಆಡಳಿತಾಧಿಕಾರಿಗಳನ್ನು ಆಗಿಂದಾಗಲೇ ನೇಮಿಸಲಾಗುತ್ತದೆ.

ಕೆರೆಗಳಲ್ಲಿ ಹೂಳು ತೆಗೆಯುವ ಬಗ್ಗೆ

522. ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ದೊಡ್ಡ ಕೆರೆಗಳಲ್ಲಿ ಹೂಳು ತೆಗೆಯದೇ ಇರುವುದರಿಂದ ಅಚ್ಚುಕಟ್ಟುದಾರರಿಗೆ ತೊಂದರೆಯಾಗಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನಾಗಮಂಗಲ ತಾಲ್ಲೂಕಿನ ಸೂಳೆಕೆರೆ, ದಾಸನಕೆರೆ, ಬಿಂಡಿಗನಕೆರೆ, ದಿಡಗ ಕೆರೆ ಇವುಗಳಲ್ಲಿನ ಹೂಳು ತೆಗೆಯದೆ ಅಚ್ಚುಕಟ್ಟುದಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?